ಜಗತ್ತು ರಾಸಾಯನಿಕಗಳ ಬೆನ್ನಟ್ಟಿ ಓಡುತ್ತಿದ್ದಾಗ, ಅದಕ್ಕೆ ಎದುರಾಗಿ ನಿಧಾನಗತಿಯ ಹೆಜ್ಜೆ ಹಾಕಿದ್ದು ಜಪಾನಿನ ಕೃಷಿ ಋಷಿ ಮಸನೊಬು ಫುಕುವೊಕ. "ಸುಮ್ಮನೇ ಇರಿ. ತಾನೇನು ಮಾಡಬೇಕು ಎಂಬುದು ಮಣ್ಣಿಗೆ ಗೊತ್ತಿದೆ" ಎಂದು ಸಹಜ ಕೃಷಿ ಪ್ರತಿಪಾದಿಸಿದ ಅವರು, ದೂರದ ಜಪಾನಿನ ತಮ್ಮ ತೋಟದಲ್ಲಿ ಬಗೆಬಗೆಯ ಪ್ರಯೋಗ ಮಾಡುತ್ತ, ಕೊನೆಗೊಂದು (ವಾಸ್ತವದಲ್ಲಿ ಕೊನೆ ಮೊದಲೆಂದೇನೂ ಇಲ್ಲ!) ಪದ್ಧತಿಯನ್ನು ಹುಡುಕಿಕೊಂಡರು. ಅದು 'ಸಹಜ ಕೃಷಿ'. ಆ ಕೃಷಿಯಲ್ಲಿ ಸಾಗಿ, ಸೋಲು–ಗೆಲುವು ಕಂಡವರು ಹಲವರು. ಫುಕುವೊಕ ತತ್ವಗಳನ್ನು ಮೂಲವಾಗಿ ಇಟ್ಟುಕೊಂಡು ಕೃಷಿ ಮಾಡಿದರೆ ಅದು ಜಗತ್ತಿನ ಹಸಿವನ್ನು ನೀಗಿಸಬಲ್ಲದು ಎಂದು ಪ್ರತಿಪಾದಿಸಿದ್ದು ಲ್ಯಾರಿ ಕಾರ್ನ್.

ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದಲ್ಲಿ ಪದವಿ ಪಡೆದ ಲ್ಯಾರಿ, ಏಷ್ಯಾದ ಜನಜೀವನ ಅಧ್ಯಯನಕ್ಕೆ ಜಪಾನಿಗೆ ಬಂದರು. ಅಲ್ಲಿ ಸಮುದಾಯಗಳ ಜೊತೆ ವಾಸವಿದ್ದು, ಅವರ ಜೀವನವಿಧಾನ ಅರಿತರು. ಭತ್ತದ ಗದ್ದೆಗಳನ್ನು ಮಾಡುತ್ತಿದ್ದ ಸಮುದಾಯಗಳ ಜೊತೆ ಒಡನಾಟ ಹೊಂದಿದ್ದ ಲ್ಯಾರಿಗೆ ಶಿಕೊಕು ದ್ವೀಪದಲ್ಲಿ ಸಹಜಕೃಷಿ ಮಾಡುತ್ತಿದ್ದ ಮಸನೊಬು ಫುಕುವೊಕ ಪರಿಚಯವಾಯಿತು. ಅವರಲ್ಲಿಗೆ ಬಂದ ಲ್ಯಾರಿ, ವರ್ಷಗಟ್ಟಲೇ ಜತೆಗಿದ್ದು ಸಹಜ ಕೃಷಿಯ ತತ್ವಗಳನ್ನು ಅರಿಯಲು ಯತ್ನಿಸಿದರು.

"ಫುಕುವೊಕ ಸಹಜ ಕೃಷಿಕನಷ್ಟೇ ಅಲ್ಲ. ಅವರೊಬ್ಬ ತತ್ವಜ್ಞಾನಿ. ಭೂಮಿಗೆ ಘಾಸಿ ಮಾಡದಿರುವುದೇ ಫುಕುವೊಕ ಕೃಷಿತತ್ವ. ಪ್ರಕೃತಿಯನ್ನು ಪೂಜಿಸುವ ಯಾವುದೇ ಸಮುದಾಯವೂ ಅದನ್ನು ಶೇಕಡ ನೂರರಷ್ಟು ಒಪ್ಪುತ್ತದೆ" ಎಂದು ಲ್ಯಾರಿ ಪ್ರತಿಪಾದಿಸುತ್ತಿದ್ದರು.

ಮಸನೊಬು ಫುಕುವೊಕ ಅವರ 'ಒಂದು ಹುಲ್ಲಿನ ಕ್ರಾಂತಿ' ಮಾಡಿದ ಕ್ರಾಂತಿಯೇನೂ ಸಣ್ಣದಲ್ಲ! ಆಧುನಿಕ ಕೃಷಿಯ ಅವಾಂತರದ ವಿರುದ್ಧ ಅವರದು ವೈಜ್ಞಾನಿಕ ತಳಹದಿಯ ಹೋರಾಟ. ದಶಕಗಳ ಬೇಸಾಯದ ಅನುಭವವನ್ನು ಅಕ್ಷರ ರೂಪಕ್ಕೆ ಅವರು ಇಳಿಸಿದರು (1975). ಫುಕುವೊಕ ಜತೆಗೆ ಇದ್ದ ಲ್ಯಾರಿ ಕಾರ್ನ್, ಆ ತತ್ವಗಳನ್ನು ಅರಿತುಕೊಂಡು ಆ ಪುಸ್ತಕವನ್ನು 'ಒನ್ ಸ್ಟ್ರಾ ರೆವಲ್ಯೂಶನ್' ಶೀರ್ಷಿಕೆಯಲ್ಲಿ ಇಂಗ್ಲಿಷ್‌ಗೆ ಅನುವಾದಿಸಿದರು. ಅದು 1978ರಲ್ಲಿ ಪ್ರಕಟವಾಯಿತು.

ಅಲ್ಲಿಯವರೆಗೆ ಮರೆಯಲ್ಲಿದ್ದ ಸಹಜಕೃಷಿಯೂ ಫುಕುವೊಕ ಅವರೂ ದಿಢೀರ್ ಎಂದು ಕೃಷಿಲೋಕಕ್ಕೆ ಪರಿಚಿತವಾದರು. 'ಒನ್ ಸ್ಟ್ರಾ' ಪುಸ್ತಕವು ತತ್ವಜ್ಞಾನ, ಪರಿಸರ ಪ್ರೇಮ ಹಾಗೂ ಮಣ್ಣಿನ ಪ್ರೀತಿಯನ್ನು ಒಳಗೊಂಡಿದ್ದರಿಂದ ಅದು ಕೇವಲ ಕೃಷಿಗಷ್ಟೇ ಸೀಮಿತವಾಗಿ ಉಳಿಯಲಿಲ್ಲ. ಆ ಕೃತಿಯ ಸಾರ ಹೇಗಿತ್ತೆಂದರೆ, ಕೆಲವೇ ವರ್ಷಗಳಲ್ಲಿ ಜಗತ್ತಿನ 25 ಭಾಷೆಗಳಿಗೆ ಅನುವಾದಗೊಂಡಿತು. ಸಹಜ ಕೃಷಿತತ್ವಗಳು ಹಾಗೂ ವಿಧಾನಗಳ ಕುರಿತ ಸರ್ವಶ್ರೇಷ್ಠ ಕೃತಿ ಎಂದು ಪರಿಗಣನೆಗೊಂಡಿತು. ಭಾರತದಲ್ಲಿ ಅದು ಓದುಗರ ಕೈಗೆ ಸಿಕ್ಕಿದ್ದು

**ಜಪಾನಿಗೆ ಸೀಮಿತವಾಗಿದ್ದ ಸಹಜಕೃಷಿಯ ಪಿತಾಮಹ ಫುಕುವೊಕ ಅವರನ್ನು ಜಗತ್ತಿಗೆ ಪರಿಚಯಿಸಿದ ಕೀರ್ತಿ ಲ್ಯಾರಿ ಕಾರ್ನ್ ಅವರದ್ದು. ಸಹಜಕೃಷಿಗಾಗಿ ಜೀವನವನ್ನೇ ಮುಡಿಪಾಗಿಟ್ಟಿದ್ದ ಲ್ಯಾರಿ ದಾವಣಗೆರೆಗೂ ಬಂದಿದ್ದರು; ನಾಡಿನ ಕೆಲವು ಕೃಷಿಕರ ಮೇಲೆ ಪ್ರಭಾವ ಬೀರಿದ್ದರು. ನಿಜ ಅರ್ಥದಲ್ಲಿ ಮಣ್ಣಿನ ಮಗನಂತಿದ್ದ ಲ್ಯಾರಿ ಕಳೆದ ನ. 18ರಂದು ನಿಧನರಾದರು. ಅಲ್ಲಿಗೆ ಸಹಜಕೃಷಿಯ ಮತ್ತೊಂದು ತಾರೆ ಮರೆಯಾದಂತಾಯಿತು.**

1984ರಲ್ಲಿ. ಮೇಲುಕೋಟೆಯ 'ಜನಪದ ಸೇವಾ ಟ್ರಸ್ಟ್'ನ ಸಂತೋಷ ಕೌಲಗಿ ಕನ್ನಡದಲ್ಲಿ 'ಒಂದು ಹುಲ್ಲಿನ ಕ್ರಾಂತಿ' ಪ್ರಕಟಿಸಿದರು (1989). 'ಸುಧಾ' ವಾರಪತ್ರಿಕೆಯಲ್ಲಿ ಪಾಂಡುರಂಗ ಹೆಗಡೆ ಅವರು ಈ ಪುಸ್ತಕದ ಕುರಿತು ಬರೆದಿದ್ದನ್ನು ಓದಿ ಫುಕುವೊಕ ವಿಚಾರಧಾರೆಗೆ ಪರಿವರ್ತನೆಯಾದವರು ಎಷ್ಟೋ ಮಂದಿ! ಪೂರ್ಣಚಂದ್ರ ತೇಜಸ್ವಿ ಕೂಡ ತಮ್ಮ 'ಪುಸ್ತಕ ಪ್ರಕಾಶನ' ಮೂಲಕ ಈ ಕೃತಿಯ ಸಾರಾಂಶ ಪ್ರಕಟಿಸಿದರು (1992). ಜಪಾನಿಗೆ ಸೀಮಿತವಾಗಿದ್ದ ಫುಕುವೊಕ ಅವರನ್ನು ಲ್ಯಾರಿ ಕಾರ್ನ್ ಜಗತ್ತಿಗೆ ಪರಿಚಯಿಸಿದ್ದು ಹೀಗೆ!

### ಸಹಜ ಕೃಷಿ ತಂತ್ರಗಳು

ಸುಸ್ಥಿರ ಕೃಷಿಗೂ ಭಾರತಕ್ಕೂ ಹೆಚ್ಚೇನೂ ದೂರವಿಲ್ಲ! ಆದರೆ ಅಧಿಕ ಇಳುವರಿಯ ಆಸೆಗೆ ರೈತರನ್ನು ಕಂದಕಕ್ಕೆ ತಳ್ಳಿದ್ದು 'ಹಸಿರು ಕ್ರಾಂತಿ'. ಇದಕ್ಕೆ ಪ್ರತಿಯಾಗಿ ಕೆಲವರು ಪರ್ಯಾಯ ಸಾಧ್ಯತೆ ಹುಡುಕಾಡಿದಾಗ ಫುಕುವೊಕ ತತ್ವಗಳು ಆಶಾಕಿರಣವಾಗಿ ಕಂಡವು. ಆ ದಾರಿಯಲ್ಲಿ ಕರಾರುವಾಕ್ಕಾಗಿ ಸಾಗಿದವರಿಗೆ ಸಿಕ್ಕಿದ್ದು ಸೋಲು–ಗೆಲುವು ಎರಡೂ ಎಂಬುದು ಕುತೂಹಲಕರ.

"ಸಹಜ ಕೃಷಿಯನ್ನು ಯಥಾವತ್ತಾಗಿ ನಕಲು ಮಾಡಿದರೆ ಅಪಾಯ! ಆ ತತ್ವಗಳನ್ನು ಸ್ಥಳೀಯ ಪರಿಸರ, ಮಣ್ಣು, ವಾತಾವರಣದ ಜತೆ ಹೊಂದಿಕೊಳ್ಳುವಂತೆ ರೂಪಿಸಬೇಕು. ಆಗಲೇ ಅದು ಯಶಸ್ವಿಯಾಗುತ್ತದೆ" ಎಂದು ಲ್ಯಾರಿ ಹೇಳುತ್ತಿದ್ದರು. ಫುಕುವೊಕ ಅವರೊಂದಿಗೆ ವರ್ಷಗಟ್ಟಲೆ ಇದ್ದು, ಆ ತತ್ವಗಳನ್ನು ಅರಿತಿದ್ದ ಲ್ಯಾರಿ ಸಹಜಕೃಷಿಯ ತಂತ್ರಗಳನ್ನು ಹಂಚಿಕೊಳ್ಳುತ್ತಿದ್ದರು.

ಫುಕುವೊಕ ಬರೆದ ಇನ್ನೊಂದು ಪುಸ್ತಕವನ್ನು 'ಸೋಯಿಂಗ್ ಸೀಡ್ಸ್ ಇನ್ ದ ಡೆಸೆರ್ಟ್' ಎಂಬ ಶೀರ್ಷಿಕೆಯಲ್ಲಿ ಲ್ಯಾರಿ ಇಂಗ್ಲಿಷ್‌ಗೆ ಅನುವಾದಿಸಿದರು. ಜತೆಗೆ ಅವರ ಫುಕುವೊಕ ಅವರ ಸಹಜ ಕೃಷಿ, ಬದುಕು ಕುರಿತಂತೆ ಬರೆದ 'ಒನ್ ಸ್ಟ್ರಾ ರೆವಲ್ಯೂಷನರಿ' ಕೃತಿಯೂ ಜನಪ್ರಿಯವಾಯಿತು.

ಫುಕುವೊಕ ತೋಟದಲ್ಲಿದ್ದು, ಸಹಜಕೃಷಿಯ ವಿಧಾನಗಳನ್ನು ಅರಿತುಕೊಂಡವರು ಸಾವಿರಾರು ಜನ. ಅದನ್ನು ಹಂಚಿಕೊಂಡವರು ವಿರಳ. ಲ್ಯಾರಿ, ತಮ್ಮ ಜೀವನವನ್ನು ಸಹಜಕೃಷಿ ಉತ್ತೇಜನಕ್ಕೆಂದೇ ಮುಡುಪಾಗಿಟ್ಟರು. ದೇಶ ವಿದೇಶಗಳ ಆಸಕ್ತರಿಗೆ ಕಾರ್ಯಾಗಾರ ಏರ್ಪಡಿಸುತ್ತ ಪ್ರಕೃತಿಪೂರಕ ಕೃಷಿ ಪರಿಕಲ್ಪನೆಗಳನ್ನು ರೂಪಿಸುತ್ತಿದ್ದರು.

ಸಹಜ ಕೃಷಿಯಲ್ಲಿ ಅಗ್ರಗಣ್ಯ ಸಾಧನೆ ಮಾಡಿದ್ದು ಗುಜರಾತಿನ ಭಾಸ್ಕರ್ ಸಾವೆ. ಲ್ಯಾರಿ ಕಾರ್ನ್ ಭಾರತಕ್ಕೆ 2018ರಲ್ಲಿ ಬಂದಾಗ, ಸಾವೆ ಅವರ ತೋಟಕ್ಕೆ ಭೇಟಿ ನೀಡಿದರು. ಬಳಿಕ ಮಹಾರಾಷ್ಟ್ರದ ಬುಡಕಟ್ಟು ಸಮುದಾಯಗಳ ಕೃಷಿ ಅರಿಯಲು ಸಂಚರಿಸಿದ್ದರು. ಅಲ್ಲಿಂದ ಅವರು ಬಂದಿದ್ದು ದಾವಣಗೆರೆ ಸಮೀಪದ 'ಏಕಾಂತಿಕಾ' ಸಹಜಕೃಷಿಯ ತೋಟಕ್ಕೆ.

ನಿಸರ್ಗದ ತತ್ವಗಳನ್ನು ಅನುಸರಿಸಿ ಕೃಷಿ ಮಾಡುತ್ತಿರುವ ರಾಘವ ಅವರ ತೋಟದಲ್ಲಿ 'ಪರ್ಮಾಕಲ್ಚರ್' (ಶಾಶ್ವತ ಕೃಷಿ) ತರಬೇತಿ ಆಯೋಜಿಸಲಾಗಿತ್ತು. ಯೂರೋಪ್, ಅಮೆರಿಕ ಹಾಗೂ ಏಷ್ಯಾದ ವಿವಿಧೆಡೆಯ ಆಸಕ್ತರು ಅದರಲ್ಲಿ ಭಾಗವಹಿಸಿದ್ದರು. "ಸಹಜ ಕೃಷಿಯನ್ನು ನಂಬಿರುವ ಹಾಗೂ ಅದೇ ವಿಧಾನ ಅಳವಡಿಸಿಕೊಂಡಿರುವ ನಮ್ಮಂಥ ಹಲವು ಕೃಷಿಕರು ಫುಕುವೊಕ ಅವರನ್ನು ಮುಖತಃ ಭೇಟಿ ಮಾಡಿಲ್ಲ. ಆದರೆ ಲ್ಯಾರಿ ಕಾರ್ನ್ ಆ ಕೊರತೆಯನ್ನು ದೂರ ಮಾಡಿದರು" ಎಂದು ನೆನಪಿಸಿಕೊಳ್ಳುತ್ತಾರೆ ರಾಘವ.

ಸಹಜ ಕೃಷಿಯಾಗಲೀ, ಸಾವಯವ ಕೃಷಿಯಾಗಲೀ ಏರುತ್ತಿರುವ ಈ ಜನಸಂಖ್ಯೆಯ ಹೊಟ್ಟೆ ತುಂಬಿಸಲ್ಲ ಎಂಬ ರಾಸಾಯನಿಕ ಕೃಷಿ ಪ್ರತಿಪಾದಕರ ಮಾತನ್ನು ಅವರು ಒಪ್ಪಲಿಲ್ಲ. ತರಬೇತಿ, ಕಾರ್ಯಾಗಾರಗಳಲ್ಲಿ ಅದನ್ನು ಅಂಕಿ–ಅಂಶಗಳ ಮೂಲಕ ಪ್ರತಿಪಾದಿಸುತ್ತಿದ್ದರು. "ಹೊಸ ತಲೆಮಾರಿನ ಯುವಕರು 'ಒಂದು ಹುಲ್ಲಿನ ಕ್ರಾಂತಿ' ಪುಸ್ತಕ ಓದಿ, ಹೀಗೆಲ್ಲ ಸುಲಭವಾಗಿ ಕೃಷಿ ಮಾಡಬಹುದಲ್ಲ ಎಂದು ರೋಮಾಂಚಿತರಾಗುತ್ತಾರೆ. ವಾಸ್ತವದಲ್ಲಿ ಅದು ಅಸಾಧ್ಯ. ಫುಕುವೊಕ ತತ್ವಗಳನ್ನು ನಮ್ಮ ವ್ಯವಸ್ಥೆಗೆ ಹೇಗೆ ಹೊಂದಿಸಿಕೊಂಡು ಕೃಷಿ ಮಾಡಬಹುದು ಎಂಬುದನ್ನು ನಿದರ್ಶನಗಳ ಸಮೇತ ಮಂಡಿಸುತ್ತಿದ್ದರು. ಆ ಜ್ಞಾನವೇ ಅದ್ಭುತ" ಎಂದು ರಾಘವ ಹೇಳುತ್ತಾರೆ. "ಉಳುಮೆ ಮಾಡದೇ, ಹಸಿರೆಲೆ ಗೊಬ್ಬರ ಬಳಸಿ, ಕಡಿಮೆ ವೆಚ್ಚದ ಕೃಷಿಯ ಗುಟ್ಟುಗಳನ್ನು ಲ್ಯಾರಿ ಅವರಿಂದ ಕಲಿತೆ" ಎಂದು ಶಿವಮೊಗ್ಗ ಜಿಲ್ಲೆ ಚುರ್ಚುಗುಂಡಿಯ ಬಿ.ಎನ್. ನಂದೀಶ್ ಸ್ಮರಿಸುತ್ತಾರೆ.

'ಮನುಷ್ಯನ ಹಸ್ತಕ್ಷೇಪದಿಂದಲೇ ಭೂಮಂಡಲಕ್ಕೆ ಹಾನಿಯಾಗುತ್ತಿದೆ. ಅದನ್ನು ತಡೆಯುವುದು ಸಹ ಮಾನವನ ಕೈಯಲ್ಲೇ ಇದೆ. ಆಹಾರ ಉತ್ಪಾದನೆ ಹೆಸರಲ್ಲಿ ಕೃಷಿಯನ್ನು ಹಾಳುಗೆಡವಿದ್ದು ಸಾಕು. ಇನ್ನಾದರೂ ಸುಸ್ಥಿರ ಕೃಷಿಯತ್ತ ಹೊರಳಬೇಕು' ಎಂದು ಪ್ರತಿಪಾದಿಸುತ್ತಿದ್ದ ಲ್ಯಾರಿ ಕಾರ್ನ್ ಕಳೆದ ವಾರ ಅಮೆರಿಕದ ಆಶ್ಲೆಂಡ್‌ನಲ್ಲಿ ನಿಧನರಾದರು. ಅವರ ಕಣ್ಮರೆಯೊಂದಿಗೆ, ಸಹಜಕೃಷಿ ಅನುಭವದ ನಂಟು ನಮ್ಮಿಂದ ಕಳಚಿದಂತಾಗಿದೆ. ■